1. ಹೌದು.

2. ಸರ್ಕಾರದಿಂದ ಬಿಲ್ ನಿಗಧಿಪಡಿಸಿಲ್ಲ ಆದರೆ ಸರ್ಕಾರದಿಂದ ನಾಮನಿರ್ದೇಶನ ಮಾಡಲ್ಪಟ್ಟ ಸಮಿತಿಯು ಚದರ ಅಡಿ ಒಂದಕ್ಕೆ ರೂ.136-00ರಂತೆ ನಿಗಧಿಪಡಿಸಿದೆ.

3. ಇಲ್ಲ.

4. ಈ ಬಗ್ಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕ್ರಮತೆಗೆದುಕೊಳ್ಳುತ್ತಿದೆ.

ಮೈಸೂರು ನಗರಕ್ಕೆ ಈಜುಕೊಳ ಮಂಜೂರು ಮಾಡುವುದು.

766 - ಶ್ರೀ ಕೆ. ಹರ್ಷಕೂಮಾರ ಗೌಡ (ಚಾಮರಾಜ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಪ್ರಸಕ್ತ ಜನಸಂಖ್ಯೆಗೆ ಅನುಗುಣವಾಗಿ ಈಜು ಕೊಳಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಎಂದಿನಿಂದ ನಿರ್ಮಾಣಕಾರ್ಯವನ್ನು ಪ್ರಾರಂಭ ಮಾಡಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಮೇಲೆ 'ಅ' ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಮೈಸೂರು ನಗರದ ವಿವಿಧ ರುದ್ರಭೂಮಿಗಳ ಅಭಿವೃದ್ಧಿ ಕಾರ್ಯದ ಬಗ್ಗೆ

1246 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ವಿವಿಧ ರುದ್ರ ಭೂಮಿಗಳ ಸಂಖ್ಯೆ ಎಷ್ಟು?

ಆ) ಪ್ರತಿ ರುದ್ರ ಭೂಮಿಗಳ ಅಳತೆ ಎಷ್ಟು?

ಇ) ಇವುಗಳಲ್ಲಿ ಎಷ್ಟು ರುದ್ರಭೂಮಿಗಳು ಯಾವಾಗ ಮಾರಾಟ ಮಾಡಲ್ಪಟ್ಟಿದೆ?

ಈ) ರುದ್ರಭೂಮಿಗಳ ಅಭಿವೃದ್ಧಿಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು?

ಉ) ಈ ರುದ್ರಭೂಮಿಗಳಿಗೆ ವಿದ್ಯುತ್ ಚಿತಾಗಾರಗಳನ್ನು ಕೊಡಲು ಸರ್ಕಾರ ನಿರ್ಧರಿಸಿದೆಯೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 17.

ಆ)

ಕ್ರ.ಸಂ.	*ಮೊಹಲ್ಲಾ*	*ಅಳತೆ*
1.	ಚಾಮರಾಜ ಮೊಹಲ್ಲಾ	2,70,00 ಚ.ಅ.
2.	ಕೃಷ್ಣರಾಜ ಮೊಹಲ್ಲಾ	1,68,000 ಚ.ಅ.
3.	ಕೃಷ್ಣರಾಜ ಮೊಹಲ್ಲಾ	33,800.ಚ.ಅ.
4.	ದೇವರಾಜ ಮೊಹಲ್ಲಾ	17,104.35 ಚ.ಅ.
5.	ಚಾಮರಾಜ ಮೊಹಲ್ಲಾ	1,27,400 ಚ.ಅ.
6.	ದೇವರಾಜ ಮೊಹಲ್ಲಾ	8,67,712 ಚ.ಅ.
7.	ಲಷ್ಕರ್ ಮೊಹಲ್ಲಾ	7,061 ಚ.ಅ.
8.	-ಡಿಟೋ-	14,409 ಚ.ಮೀ.
9.	-ಡಿಟೋ-	9,439 ಚ.ಮೀ.